Railway Line from Marikuppam to Kamasamudram.

Q.—540. **Sri P. M. SWAMIDURAI** (K. G. F.—Scheduled Castes).—

Will the Government be pleased to state :—

whether they intend recommending to the Centre that a railway line connection from Marikuppam, K.G.F. to Kamasamudram be put up so as to avoid the trouble of making a journey to Bangarpet to catch the Madras train ?

A.—**Sri H. M. CHANNABASAPPA** (Minister for Industries) [On behalf of Sri Kadidal MANJAPPA (Minister for Revenue and Public Works)].—

The matter will be examined.

Sri P. M. SWAMIDURAI.—I have no supplementaries.

Causeway for a Halla across the Road from Davangere to Maganahalli.

Q.—638. **Srimathi Bellary SIDDAMMA** (Davangere).—

Will the Government be pleased to state :—

(*a*) whether an estimate has not so far been prepared by the Public Works Department for constructing a causeway (*Parusubandi*) for the halla which runs across the road from Davangere City to Maganahalli ;

(*b*) the reason for delaying it so far ?

A.—**Sri T. CHANNIAH** (Minister for Public Health and Local Self-Government).—

(*a*) No.

(*b*) Does not arise in view of reply to (*a*).

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ನಾನು ಮಾಗನ ಹಳ್ಳಿಗೆ ಹೋಗುವರಸ್ತೆಗೆ approach ರೋಡ್ ಮಾಡ ಬೇಕೆಂದು ಕೇಳಿದ್ದೇನೆ. ಆದರೆ ಕನ್ನಡದಲ್ಲಿ ಅದಕ್ಕೆ "ಪರಸು ಬಂದಿ" ಎಂದು ಹಾಕಿದ್ದಾರೆ. ಅದನ್ನು ನೋಡಿ ಸರಿಪಡಿಸುತ್ತೀರಾ ?

ಶ್ರೀ ಟಿ. ಚನ್ನಯ್ಯ.—ತಾವು ಹೇಳತಕ್ಕ ರಸ್ತೆಯನ್ನು ಯಾರು ಮಾಡಬೇಕು ಎಂಬುದು ಇನ್ನೂ ಸರಕಾರದವರ ಪರ್ಯಾಲೋಚನೆಯಲ್ಲಿದೆ. ಈಗ ಡಿಸ್ಟ್ರಿಕ್ಟ್ ಬೋರ್ಡ್‌ನವರಾಗಲಿ, ಪಿ.ಡಬ್ಲ್ಯು.ಡಿ.ಯವರಾಗಲೀ ಈ ಜವಾಬ್ದಾರಿಯನ್ನು ವಹಿಸಿಕೊಂಡಿಲ್ಲ. Inter-Village Communication Road ಮಾಡುವ ವಿಚಾರದಲ್ಲಿ ವಿವರಗಳನ್ನು ತರಿಸಿಕೊಂಡು ತಕ್ಕ ಏರ್ಪಾಡುಗಳನ್ನು ಮಾಡುತ್ತೇವೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಹಿಂದೆ ಶ್ರೀ ಎಲ್. ಸಿದ್ದಪ್ಪನವರ ಕಾಲದಲ್ಲಿ ಆ ರಸ್ತೆ ಮಂಜೂರು ಆಯಿತು. ಎಷ್ಟೋ ವರ್ಷಗಳಿಂದ ಅದು ಆಗದೆ ಹಾಗೆಯೇ ನಿಂತಿದೆ. ಅದನ್ನು ಮಾಡಿಸಿಕೊಡಬೇಕೆಂಬ ಉದ್ದೇಶದಿಂದ ಪ್ರಶ್ನೆಯನ್ನು ಕಳುಹಿಸಿದ್ದೇನೆ.

ಶ್ರೀ ಟಿ. ಚನ್ನಯ್ಯ.—1950ನೇ ಇಸವಿಯಲ್ಲಿ Inter-Communication Road ಅಂದರೆ ಗ್ರಾಮಾಂತರ ಗಳಲ್ಲಿ ಮಾಡತಕ್ಕ ರಸ್ತೆಯೆಂದು ಪರಿಗಣಿಸಿ ಅದನ್ನು ತೆಗೆದುಕೊಳ್ಳಬೇಕೆಂದು ಸರ್ಕಾರದವರು ಆಲೋಚನೆ ಮಾಡಿದರು. ಆದರೆ ಅದು ಹಾಗೆಯೇ ನಿಂತುಹೋಗಿದೆ. ಅದನ್ನು ಸಾಧ್ಯವಾದಷ್ಟುಮಟ್ಟಿಗೆ ಮುಂದೆ ತೆಗೆದುಕೊಂಡು ಮಾಡುವುದಕ್ಕೆ ಪ್ರಯತ್ನಮಾಡುತ್ತೇವೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ನಿಂತುಹೋಗಿರುವುದಕ್ಕೆ ಕಾರಣವೇನು ?

ಶ್ರೀ ಟಿ. ಚನ್ನಯ್ಯ.—ಕಾರಣ ಏನೆಂದು ಹೇಳುವುದಕ್ಕಾಗುವುದಿಲ್ಲ. ಚಿಕ್ಕದಾಗಿದ್ದಂಥ ರಾಜ್ಯದಲ್ಲೇ ಇಂತಹ ರಸ್ತೆಗಳಿಲ್ಲದೆ ತೊಂದರೆಯಾಗಿರುವಾಗ ದೊಡ್ಡ ರಾಜ್ಯವಾದಾಗ ಎಷ್ಟು ಕಷ್ಟವಾಗುತ್ತದೆ ಎಂಬುದನ್ನು ತಾವೇ ಊಹಿಸಿ. (ನಗು)

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಇದು ಬಹಳ ದಿವಸಗಳಿಂದ ಆಗದೆ ಇದೆ. ಇದು ಜನರಿಗೂ, ಗಾಡಿ ಗಳಿಗೂ ಓಡಾಡುವುದಕ್ಕೆ ಬಹಳ ಅವಶ್ಯಕವಾದ ರಸ್ತೆ, ಆದ್ದರಿಂದ ಇದಕ್ಕೆ ಗಮನ ಕೊಟ್ಟು ಜಾಗ್ರತೆ ಮಾಡಿಸಿ ಕೊಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಸರ್ವ ಪ್ರಯತ್ನವನ್ನೂ ಮಾಡುತ್ತೇವೆ.

Ajjampur-Bukkambudi Road.

Q.—648. **Sri T. C. BASAPPA** (Tarikere) —

Will the Government be pleased to state :—

(*a*) whether representations have not been received to classify Ajjampur-Bukkambudi road as a State Fund road ;

(*b*) whether it has come to their notice that the Revenue and Home Ministers have given their assurance in this respect ?

(*c*) the steps taken by them in this direction ?

A.—**Sri T. CHANNIAH** (Minister for Public Health and Local Self-Government).—

(*a*) and (*b*) Yes.

(*c*) Action is being taken to improve the road. The question of conversion into a State Fund road will also be considered.

ಶ್ರೀ ಟಿ. ಸಿ. ಬಸಪ್ಪ.—ಅಜ್ಜಂಪುರ-ಬುಕ್ಕಾಂಬುಧಿ, ಶಿವಮೊಗ್ಗ-ಬುಕ್ಕಾಂಬುಧಿ ರಸ್ತೆಗಳು State Fund ರಸ್ತೆಗಳು ಅಲ್ಲವೇ ?

ಶ್ರೀ ಟಿ. ಚನ್ನಯ್ಯ.—ಅವು ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಗಳು.

ಶ್ರೀ ಟಿ. ಸಿ. ಬಸಪ್ಪ.—ಶಿವಮೊಗ್ಗ-ಬುಕ್ಕಾಂಬುಧಿ ರಸ್ತೆ State Fund ರಸ್ತೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಅದು State Fund road.

ಶ್ರೀ ಟಿ. ಸಿ. ಬಸಪ್ಪ.—ಅದರ ಪೂರ್ವಕ್ಕೆ ಇರುವ ಅಜ್ಜಂಪುರ-ತರೀಕೆರೆ ರಸ್ತೆ State Fund ರಸ್ತೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಟಿ. ಸಿ. ಬಸಪ್ಪ.—ಈ ರಸ್ತೆಯನ್ನು ಸ್ಟೇಟ್-ಫಂಡ್ ರಸ್ತೆಯನ್ನಾಗಿ ಮಾಡಬೇಕೆಂದು ಎಷ್ಟು ವರ್ಷಗಳಿಂದ ತಮ್ಮನ್ನು ಕೇಳಿಕೊಳ್ಳುತ್ತಿದ್ದೇವೆ ?

ಶ್ರೀ ಟಿ. ಚನ್ನಯ್ಯ.—ಇಷ್ಟೇ ವರ್ಷಗಳಿಂದ ಕೇಳುತ್ತಿದ್ದಾರೆ ಎನ್ನುವ ತಪಶೀಲು ತಿಳಿಯದು. ಆದರೆ ರಸ್ತೆಯನ್ನು ಪರಿಪಡಿಸಬೇಕು. ಸ್ಟೇಟ್-ಫಂಡ್ ರಸ್ತೆಯನ್ನಾಗಿ ಮಾಡಬೇಕು ಎಂದು ಕೆಲವು ವರ್ಷಗಳಿಂದ ಜನರು ಕೇಳುತ್ತಿದ್ದಾರೆಂದು ಸರ್ಕಾರಕ್ಕೆ ವರದಿಬಂದಿದೆ.

ಶ್ರೀ ಟಿ. ಸಿ. ಬಸಪ್ಪ.—10 ವರ್ಷಗಳಿಂದ ಸ್ಟೇಟ್ ಫಂಡ್ ರಸ್ತೆಗಳನ್ನಾಗಿ ಮಾಡಬೇಕೆಂದು ಕೇಳುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಸ್ಟೇಟ್ ಫಂಡ್ ರಸ್ತೆಯನ್ನಾಗಿ ಮಾಡಬೇಕೇ, ಬೇಡವೇ ಎಂಬುದು ಸರ್ಕಾರದ ಮುಂದೆ ಇದೆ.

ಶ್ರೀ ಟಿ. ಸಿ. ಬಸಪ್ಪ.—ತಾವು (b) ಪ್ರಶ್ನೆಗೆ ಉತ್ತರವಾಗಿ ರೆವಿನ್ಯೂ ಶಾಖೆಯ ಮಂತ್ರಿಗಳೂ ಮತ್ತು ಒಳಾಡಳಿತ ಶಾಖೆಯ ಮಂತ್ರಿಗಳೂ ಇದನ್ನು ಸ್ಟೇಟ್ ಫಂಡ್ ರಸ್ತೆಯನ್ನಾಗಿ ಮಾಡಬೇಕೆಂಬ ವಿಚಾರದಲ್ಲಿ ಭರವಸೆಯನ್ನು ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದೀರಿ. ತಾವು ಹಾಗೆ ಹೇಳಿರುವುದು ಪ್ರಶ್ನೋತ್ತರಗಳಿಂದ ಗೊತ್ತಾಗುವುದಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಭರವಸೆ ಕೊಟ್ಟಿದ್ದೇವೆ ಎಂದು ಉತ್ತರದಲ್ಲಿ ಕೊಟ್ಟಿದ್ದೇವೆ. ಈಗ ಸ್ಟೇಟ್ ಫಂಡ್ ರಸ್ತೆಯನ್ನಾಗಿ ಮಾಡತಕ್ಕ ವಿಚಾರದಲ್ಲಿ ಸರ್ಕಾರದವರು ಆ ರಸ್ತೆಯನ್ನು ಸ್ಟೇಟ್ ಫಂಡ್ ರಸ್ತೆಯನ್ನಾಗಿ ಮಾಡಬೇಕೇ, ಬೇಡವೇ ಎಂಬುದನ್ನು ವಿಚಾರಮಾಡುತ್ತಿದ್ದಾರೆ.

ಶ್ರೀ ಟಿ. ಸಿ. ಬಸಪ್ಪ.—ಭರವಸೆ ಕೊಟ್ಟಮೇಲೆ ಪುನರ್ವಿಮರ್ಶೆ ಮಾಡಬೇಕೆಂದು ಅರ್ಥವೇ ?

ಶ್ರೀ ಟಿ ಚನ್ನಯ್ಯ.—ಕಷ್ಟಸಾಧ್ಯಗಳನ್ನು ನೋಡಬೇಕು. ಹಣ ಇರಬೇಕು. ಪಿ.ಡಬ್ಲ್ಯು.ಡಿ. ಯವರು ತಮ್ಮ ವಶಕ್ಕೆ ತೆಗೆದುಕೊಳ್ಳುವುದಕ್ಕೆ ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ಟಿ. ಸಿ. ಬಸಪ್ಪ.—ಹಾಗಾದರೆ, ಭರವಸೆಗೆ ಬೆಲೆ ಏನು ?

ಅಧ್ಯಕ್ಷರು.—ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆಂದು ಹೇಳಿರಬಹುದು.

ಶ್ರೀ ಟಿ. ಸಿ. ಬಸಪ್ಪ.—Assurance ಎಂದರೆ ಏನರ್ಥ ?

ಶ್ರೀ ಟಿ. ಚನ್ನಯ್ಯ.—ಆ ಸ್ಥಳಕ್ಕೆ ಮಂತ್ರಿಗಳು ಹೋದಾಗ ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆ ಎಂದು ಹೇಳುತ್ತಾರೆ. ಅಂದಮಾತ್ರಕ್ಕೇ ಮಾಡಿಕೊಡುವುದಕ್ಕಾಗುತ್ತದೆಯೇ ?

ಶ್ರೀ ಟಿ. ಸಿ. ಬಸಪ್ಪ.—ಮಾಡಿಕೊಡುತ್ತೇವೆ ಎಂದು ಹೇಳಬೇಕಾದರೆ, assurance ಅಲ್ಲದೆ ಯಾವ ಪದವನ್ನು ಪ್ರಯೋಗಿಸಬೇಕು ?

ಶ್ರೀ ಟಿ. ಚನ್ನಯ್ಯ.—ಸಾಮಾನ್ಯವಾಗಿ ಮಾಡಿಕೊಡಬೇಕಾಗುತ್ತದೆ. ಆದರೆ ಹಣಕಾಸಿನ ಪರಿಸ್ಥಿತಿಯನ್ನೂ ಗಮನಿಸಬೇಕಾಗುತ್ತದೆ. ಈ ಸಾರಿಯೇ ಇದನ್ನು ಯೋಜನೆಮಾಡಿ ಮಂಜೂರಾತಿಯನ್ನು ಕೊಡುವುದಕ್ಕೆ ಪ್ರಯತ್ನಮಾಡುತ್ತೇವೆ.

ಶ್ರೀ ವೆಂ. ಎಂ. ಚಂದ್ರಶೇಖರಯ್ಯ.—ರೆವಿನ್ಯೂ ಮಂತ್ರಿಗಳು ಪ್ರವಾಸ ಕಾಲದಲ್ಲಿ ಆ ರಸ್ತೆಯಲ್ಲಿ ಹೋದಾಗ ಸ್ವಲ್ಪ ಗ್ರ್ಯಾಂಟು ಕೊಟ್ಟು ಒಂದೆರಡು ತಿಂಗಳಲ್ಲಿ ರಿಪೇರಿ ಮಾಡಿಸಿಕೊಡುತ್ತೇವೆಂದು ಹೇಳಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಚನ್ನಯ್ಯ.—ನನ್ನ ಗಮನಕ್ಕೆ ಬಂದಿಲ್ಲ. ಇನ್ನು ಮುಂದೆ ಅಂಥಾ ಗ್ರ್ಯಾಂಟುಗಳನ್ನು ಕೊಡುವುದು ಬಹಳ ಕಷ್ಟ.

ಶ್ರೀ ಟಿ. ಸಿ. ಬಸಪ್ಪ.—ಮಂತ್ರಿಮಂಡಲದ ಒಬ್ಬರು ಮಂತ್ರಿಗಳು ಪ್ರವಾಸ ಹೋದ ಕಾಲದಲ್ಲಿ ಕೊಟ್ಟ ಭರವಸೆಯನ್ನು ಇನ್ನೊಬ್ಬ ಮಂತ್ರಿಗಳು ನೆರವೇರಿಸುವುದಿಲ್ಲವೆ ?

(No Answer)

Taluk Development Committees.

Q.—701. **Sri B. P. NAGARAJA MURTHY** (Malavalli).—

Will the Government be pleased to state :—

(*a*) the basis on which the taluk development committees were constituted ;

(*b*) whether the reports of the Amildars of the concerned taluks and the Deputy Commissioners of the concerned districts were called for before they were constituted ;

(*c*) whether the reports of Taluk Congress samithis have been called for in this connection ;

(*d*) the percentage of Congress members out of the Taluk samithi members ;

(*e*) whether attention is paid towards giving proper representation to the Hoblis of the respective taluks while constituting these com mittees ;

(*f*) if so, how that representation is given ?

A.—**Sri T. CHANNIAH** (Minister for Public Health and Local Self-Government).—

(*a*) The basis is explained in Government Order No. L.B. 4112-41—L.D.W. 3-55-1, dated 2nd August 1955.

(*b*) Yes.

(*c*) No.